'ರೋಮಾಂಚನಗೊಂಡು ವಿವರಿಸಬಾರದು' ಎಂಬ ಎಚ್ಚರವನ್ನೂ ಲೇಖಕರು ಹೇಳಿದ್ದಾರೆ. ವಸಾಹತು ಪೂರ್ವ ಕಾಲ, ವಸಾಹತು ಆಳ್ವಿಕೆಯ ಕಾಲ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿವಿಧ ಭಾಷಿಕ, ಸಾಮಾಜಿಕ ಸಮುದಾಯಗಳ ನಡುವೆ ಇದ್ದ, ಇರುವ ಬಾಂಧವ್ಯ, ರೀತಿ, ನೀತಿಗಳು ಬೇರೆಬೇರೆ ಎಂಬ ಎಚ್ಚರದೊಡನೆ ಯಕ್ಷಗಾನದಲ್ಲಿ ಬಿಂಬಿತವಾಗುವ ಸಾಮಾಜಿಕತೆಯ ಕಥನವನ್ನು ಈ ಅಧ್ಯಾಯದಲ್ಲಿ ಕಾಣುತ್ತೇವೆ.

'ಶಬ್ದಕ್ರೀಡೆಯ ರೀತಿ ರಿವಾಜು' ಎಂಬ ಮೂರನೆಯ ಅಧ್ಯಾಯವು ಯಕ್ಷಗಾನದಲ್ಲಿ ಹಾಸ್ಯದ ಸ್ವರೂಪ, ಬಳಕೆಯನ್ನು ಕುರಿತು ಹೇಳುತ್ತದೆ. ಹಾಸ್ಯದ ವಿಶ್ವರೂಪ ಮತ್ತು ಕ್ರೂರ ರೂಪಗಳನ್ನು ಪಕ್ಕಪಕ್ಕದಲ್ಲಿ ಇರಿಸಿ ತೋರಿಸುತ್ತದೆ. ಹಾಸ್ಯಪಾತ್ರವು ದೇವರನ್ನೂ ಸಾಮಾಜಿಕ ಸಂಸ್ಥೆಗಳನ್ನೂ ಲೇವಡಿ ಮಾಡುತ್ತ ಅಧಿಕಾರಕ್ಕೆ ಅಂಕುಶವಾಗಬಹುದಾದಷ್ಟು ಶಕ್ತವಾದದ್ದು. ಈಗ ವಿದೂಷಕರಿಲ್ಲ, ಹಾಸ್ಯಗಾರರಿದ್ದಾರೆ; ಕಲಾವಿದರಿಲ್ಲ, ರಾಜಕೀಯ ಪಕ್ಷಗಳ ಕಾರ್ಯಕರ್ತರಿದ್ದಾರೆ, ಕಲಾವಿದರು ಬಲಿಪಶುಗಳಾಗಿದ್ದಾರೆ ಎಂಬುದನ್ನು ಮನದಟ್ಟು ಮಾಡುತ್ತದೆ. ನುಡಿಜಾಣತನ, ಶಬ್ದಸಂಪತ್ತು, ತಟ್ಟನೆ ಹಲವು ಅರ್ಥಗಳನ್ನು ಹೊಮ್ಮಿಸುವ ಸಾಮರ್ಥ್ಯ ಇವೆಲ್ಲ ಗುಣಗಳಿದ್ದ ಕುಂಬಳೆಯಂಥವರು ತಮ್ಮ ಶಕ್ತಿಯನ್ನೆಲ್ಲ ಮತೀಯ ದ್ವೇಷಸಾಧನೆಗೆ ಬಳಸುತ್ತ ಅಂಥ ಹಲವು ಕಲಾವಿದರನ್ನೂ ಪರಂಪರೆಯನ್ನೂ ಸೃಷ್ಟಿಸಿದ ವಿಷಾದ ಈ ಅಧ್ಯಾಯದಲ್ಲಿ ಕಣ್ಣಿಗೆ ಕಟ್ಟುತ್ತದೆ. ಇದು ಕೇವಲ ಕಲಾವಿದರ ಮಿತಿ, ದೌರ್ಬಲ್ಯವಲ್ಲ, ತಮ್ಮ 'ಅಭಿರುಚಿಯಲ್ಲಿ ಅಗ್ಗದ ದರಕ್ಕೆ ಚೌಕಾಶಿ ಮಾಡುವ ಪ್ರೇಕ್ಷಕ' ಸಮೂಹವೂ ಕಾರಣವೆಂದೂ ಸ್ಪಷ್ಟಪಡಿಸುತ್ತದೆ.

'ತಮ್ಮ ಕಲಾಕೌಶಲವನ್ನು ವೃದ್ಧಿಪಡಿಸಿ ಕೊಳ್ಳುವುದರತ್ತ ತುಡಿಯದೆ, ಚುನಾವಣಾ ರಾಜಕೀಯಕ್ಕಾಗಿ ಸೆಣಸಾಡಲು ನಿಂತಿರುವ ಪಕ್ಷಗಳ ಜೊತೆಗೆ ಗುರುತಿಸಿಕೊಂಡು, ರಾಜಕೀಯ ವಾಸ್ತವಿಕತೆಯನ್ನು ತಿರಸ್ಕರಿಸುವ ಅಥವಾ ರಾಜಕೀಯ ವಿವೇಕವನ್ನು ಧಿಕ್ಕರಿಸುವ ಪ್ರಯತ್ನವನ್ನು ನಡೆಸಿದಾಗ' ಕಲೆಯ ಭಾಷೆ ಅಳವನ್ನು ಕಳೆದುಕೊಳ್ಳುತ್ತದೆ. ಹಾಗೆಂದು ಯಾವುದೇ ಕಲೆ ಸಿದ್ಧಾಂತ ರಹಿತವಾಗಿರಲು ಸಾಧ್ಯವಿಲ್ಲ. ಸಿದ್ಧಾಂತ ಮತ್ತು ಕಲೆಯ ಸಂಬಂಧವನ್ನು 'ಸಿದ್ಧಾಂತಗಳ ದಿಗ್ವಿಜಯ'ಎಂಬ ಐದನೆಯ ಅಧ್ಯಾಯ ಪರಿಶೀಲಿಸುತ್ತದೆ. ಈ ಅಧ್ಯಾಯವನ್ನು ಓದುವಾಗ ಕುರ್ತಕೋಟಿಯವರ 'ಸಂಕೇತಗಳ ವಿಜಯ' ಎಂಬ ಪ್ರಬಂಧ ನೆನಪಾಗುತ್ತದೆ. ಬಾಬರಿ ಮಸೀದಿ ಧ್ವಂಸದ ಸಮಯದಲ್ಲಿ ಬರೆದ ಆ ಲೇಖನ ರಾಮ ಜನ್ಮಭೂಮಿ, ಪ್ರಾರ್ಥನಾ ಮಂದಿರ ಇಂಥ ಸಂಕೇತಗಳನ್ನೇ ಬಹು ಮುಖ್ಯವೆಂದು ಭಾವಿಸುವ ದುರಂತವನ್ನು ಕುರಿತು ವಿವರಿಸಿತ್ತು. ಅದರ ಇನ್ನೊಂದು ಮಗ್ಗುಲು ಎಂಬಂತೆ ಈ ಅಧ್ಯಾಯವು ಮನುಷ್ಯರು ಭಾವನೆಗಳ ಹಿಂದೆ ಅಡಗಿರುವ ವಿಚಾರ ಮತ್ತು ಕಲ್ಪನೆಗಳ ತರ್ಕಬದ್ಧ ಜೋಡಣೆಯ ವಿನ್ಯಾಸ ಅಥವಾ ಸಿದ್ಧಾಂತವನ್ನು ಕುರಿತು ವಿವೇಚಿಸಿದೆ. ಇಂಥ ಒಂದು ಅರ್ಥಲೋಕ ಅಥವಾ ಐಡಿಯಾಲಜಿ ಇರದ ಮನುಷ್ಯರೇ ಇಲ್ಲ.

ಹಿಂದೂತ್ವವೆಂಬ ಐಡಿಯಾಲಜಿ ಬೆಳೆದ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ ವಿವಿಧ ನಂಬಿಕೆ, ಆಚಾರ. ವಿಚಾರ, ಕಟ್ಟಳೆಗಳನ್ನೆಲ್ಲ ಒಳಗೊಂಡ ಮಹಾ ಒಕ್ಕೂಟದಂಥ ಸನಾತನ ಸ್ಥಿತಿ, ವೇದ ಪ್ರಾಮಾಣ್ಯಕ್ಕೆ ಬದ್ಧವಾದ, ಆನಂತರ ಪುರಾಣ, ಆಚರಣೆಗಳೇ ಮುಖ್ಯವಾದ ಹಂತಗಳನ್ನು ಹಾದು, ಮಧ್ಯಯುಗದಲ್ಲಿ ರಾಜಕೀಯ ಅಧಿಕಾರಕ್ಕೆ ಪೂರಕವಾಗಿ, ಬ್ರಿಟಿಷ್ ಆಳ್ವಿಕೆಯ ಹೊತ್ತಿನಲ್ಲಿ ಸುಧಾರಣೆಯ ರಾಜಕೀಯದ ಮುಖವಾಗಿ ಸ್ವಾತಂತ್ರ್ಯ ನಂತರದಲ್ಲಿ ಏಕ ಭಾಷೆ, ಏಕೋದ್ದೇಶ, ಏಕಾಗ್ರತೆಯ ಸಿದ್ಧಾಂತವಾಗಿ ಬದಲಾಗಿ ಹಿಂದೂತ್ವವೇ ಭಾರತದ ಮೂಲ ಸಿದ್ಧಾಂತವೆಂಬ ಐಡಿಯಾಲಜಿ ವ್ಯಾಪಕವಾಗಿ ಬೆಳೆದ ನಿದರ್ಶನವನ್ನು ಲೇಖಕರು ಕರಾವಳಿಯ ಉದಾಹರಣೆಯ ಮೂಲಕ ಮಂಡಿಸಿದ್ದಾರೆ.

ಮನುಷ್ಯರೇ ಆಗಲಿ, ಕಲೆಯೇ ಆಗಲಿ ತಾವು ಒಪ್ಪಿದ ಸಿದ್ಧಾಂತಕ್ಕೇ ಪೂರ್ತಿಯಾಗಿ ತೆತ್ತುಕೊಂಡರೆ, ಸಿದ್ಧಾಂತವು ಒಳಗೊಳ್ಳಲಾಗದ ಬದುಕಿನ ಅಂಶಗಳು ಅಮುಖ್ಯ, ನಾಶಕ್ಕೆ ಯೋಗ್ಯ ಎಂಬ